with me. Probably, he might have received the information from some unknown sources, about which I do not know how for it is authentic. I only said that certain regulations come directly under the purview of the Government of India, the Government of Karnataka has never ventured to issue licences to such of the banned items.

ಶ್ರೀ ಎಸ್.ಎಸ್. ಅರಕೇರಿ.—ಈಗ ಇಡೀ ರಾಜ್ಯದಾದ್ಯಂತ ಹಳ್ಳಿಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಏನಿದ್ದಾರೆ ಅವರಿಗೆ ರಾಷ್ಟ್ರೀಯ ಧೋರಣೆ ಅನ್ವಯ ಅಲ್ಪ ಪ್ರಮಾಣದ ಕೈಗಾರಿಕೆಯಲ್ಲಿ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಅವರನ್ನು ಐಡೆಂಟಿಫೈ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಇದೆಯಾ

ಶ್ರೀ ಮಾಣಿಕ್‌ರಾವ್ ಪಾಟೀಲ್.—ಪ್ರತಿ ಜಿಲ್ಲೆಯಲ್ಲೂ, ಈಗ ಈ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಪ್ರತಿ ಜಿಲ್ಲೆಯಲ್ಲಿಯೂ ಸೆಮಿನಾರ್, ಮತ್ತು ಮೀಟಿಂಗ್‌ಗಳ ಮುಖಾಂತರ ನಿರುದ್ಯೋಗ ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾದಂತಹ ಮಾಹಿತಿಗಳನ್ನು ಕೊಡುತ್ತಿದ್ದಾರೆ. ಮುಂದಕ್ಕೂ ಕೂಡ ಇದೇ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋಗುತ್ತೇವೆ.

Amount Collected for Educational fund in KSRTC.

1066 SRI PAMAPATHY (Davangere).—Will the Minister for Transport and Minor Irrigation be pleased to state.—

(a) whether any amount is recovered from KSRTC Employees towards the Educational Fund of Employees Children

(b) if so the total amount collected and spent for the purpose

(c) the benefits given to the Children out of this amount

SRI M.M. J. SADYOJATHA Minister for Transport and Minor Irrigation.—

(a) Yes. (Rs. 1 is recovered every month from each employee).

(b) Rs. 15,293-20 collected upto the end of March 82. No amount has been spent so far.

(c) The formulation of the Scheme regarding Educational Assistance to the Children of the employees is being discussed with the Labour Representatives and finalised. In the meantime no amount has been spent in this behalf.

ಶ್ರೀ ಬಿ.ವಿ. ಕಕ್ಕಿಲಾಯ.—ಸ್ವಾಮಿ, ಕೆ.ಎಸ್.ಆರ್.ಟಿ.ಸಿ. ಯಲ್ಲಿ ನೌಕರರಿಂದ ತಲಾ ೧ ರೂಪಾಯಿಯಂತೆ ವಸೂಲು ಮಾಡಿ ೧೫,೧೯,೨೫೯-೨೦ ರೂಪಾಯಿಗಳನ್ನು ಸಂಗ್ರಹಿಸಿದ್ದು ಆದು ತಮ್ಮ ಸ್ವಾಧೀನದಲ್ಲಿದೆ. ಈ ಶುಲ್ಕವನ್ನು ಕೆ.ಎಸ್.ಆರ್.ಟಿ.ಸಿ. ನೌಕರರಿಂದ ಯಾವಾಗ ವಸೂಲು ಮಾಡಲು ಶುರುಮಾಡಿದ್ದೀರಿ ಈ ನಿಧಿಗೆ ಸರ್ಕಾರದಿಂದ ಏನಾದರೂ ದೇಣಿಗೆಯನ್ನು ಕೊಡುತ್ತಿದ್ದೀರಾ ಯಾವಾಗ ಈ ಕಾರ್ಯಕ್ರಮವನ್ನು ಆರಂಭಿಸಿದ್ದೀರಿ ಎಂಬುದನ್ನು ಹೇಳುತ್ತೀರಾ

ಶ್ರೀ ಕೆ. ಯಂಕಟಪ್ಪ(ಸಾರಿಗೆ ಮತ್ತು ಸಣ್ಣ ನೀರಾವರಿ ಮಂತ್ರಿಗಳ ಪರವಾಗಿ).—ಇದು ೧೯೭೮ ರಿಂದ ಪ್ರಾರಂಭವಾಯಿತು. ಈ ನೌಕರರ ಮಕ್ಕಳ ಶಿಕ್ಷಣದ ನಿಧಿಯಲ್ಲಿ ಸಂಗ್ರಹವಾಗಿರುವ ೧೫,೧೯,

೨೫೯–೨೦ ರೂಪಾಯಿಗಳನ್ನು ಸೇರಿಸಿ ಈಗ ಇರತಕ್ಕಂಥ ಒಟ್ಟು ಹಣ ೩೩,೪೯,೯೫೭ ರೂಪಾಯಿಗಳು ಇದರೊಳಗೆ ಕಾರ್ಪೊರೇಷನ್‌ನಿಂದ ಮ್ಯಾಚಿಂಗ್ ಗ್ರಾಂಟ್ ಕಾಂಟ್ರಿಬ್ಯೂಶನ್ ೧೯,೨೯ ೪೦೨ ರೂಪಾಯಿಗಳು ಇದೆ. ಕೆ.ಎಸ್.ಆರ್.ಟಿ.ಸಿ ಕ್ರೆಡಿಟ್ ಕೊ–ಆಪರೇಟಿವ್ ಸೊಸೈಟಿಯಿಂದ ಬಂದ ಬಡ್ಡಿ ಹಣ ೩.೨೮,೯೭೨ ರೂಪಾಯಿಗಳು. ಒಟ್ಟು ೩೩,೪೯,೯೫೭ ರೂಪಾಯಿಗಳನ್ನು ೧೯೮೨ನೇ ಮೇ ತಿಂಗಳವರೆಗೆ ಈ ನಿಧಿಯಲ್ಲಿ ಜಮಾ ಮಾಡಿಕೊಳ್ಳಲಾಗಿದೆ.

ಶ್ರೀ ಬಿ.ವಿ. ಕಕ್ಕಿಲಾಯ.—ಇದು ೧೯೭೮ರಿಂದ ಪ್ರಾರಂಭವಾಯಿತು ಎಂದು ಹೇಳಿದಿರಿ. ಇದನ್ನು ಖರ್ಚು ಮಾಡುವುದಕ್ಕೆ ಇನ್ನೂ ಕೂಡ ಶೈಕ್ಷಣಿಕ ನೆರವು ನೀಡುವುದರ ಬಗ್ಗೆ ಕಾರ್ಮಿಕ ಪ್ರತಿನಿಧಿಗಳೊಂದಿಗೆ ಚರ್ಚಿಸಿ ನಿರ್ಧಾರಕ್ಕೆ ಬರುತ್ತೇವೆ ಎಂದು ಹೇಳಿದಿರಿ ಈ ಬಗ್ಗೆ ಮಾತುಕತೆಗಳು ಜರುಗುತ್ತಿವೆಯೇ ಮತ್ತು ಇದನ್ನು ಯಾವಾಗ ಅಂತಿಮಗೊಳಿಸುತ್ತೀರಿ?

ಶ್ರೀ ಕೆ. ಯಂಕಟಪ್ಪ.—ಈಗ ಈ ಸಂಸ್ಥೆಯ ಸದಸ್ಯರುಗಳಲ್ಲಿ ಐದು ಜನರು ಅಧಿಕಾರಿಗಳು ಇದ್ದಾರೆ. ೬ ಜನರು ಯೂನಿಯನ್‌ನವರು ಇದ್ದಾರೆ. ಕೆ.ಎಸ್.ಆರ್.ಟಿ.ಸಿ ಪೆಡರೇಷನ್ ಅಧ್ಯಕ್ಷರೇ ಇದಕ್ಕೆ ಅಧ್ಯಕ್ಷರಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯೂಗಿ ಸ್ಟಾಫ್ ಆಸೋಸಿಯೇಷನ್ ಆಫ್ ಸೆಂಟ್ರಲ್ ಆಫೀಸ್ ಹುಬ್ಬಳ್ಳಿ ಡಿವಿಜನ್, ಕೋಲಾರ, ಬಳ್ಳಾರಿ, ಡಿವಿಜನ್, ಕೆಎಸ್‌ಆರ್‌ಟಿಸಿ ಎಂಪ್ಲಾಯೀಸ್ ಫೆಡರೇಶನ್ ಅಧಿಕಾರಿಗಳ ಮಟ್ಟದಲ್ಲಿ ಚೀಫ್ ಪರ್ಸೊನೆಲ್ ಮ್ಯಾನೇಜರ್, ಚೀಫ್ ಅಕೌಂಟ್ಸ್ ಆಫೀಸರ್ ಚೀಫ್ ಲೇಬರ್ ಆಫೀಸರ್ ಡೆಪ್ಯುಟಿ ಚೀಫ್ ಅಕೌಂಟ್ಸ್ ಆಫೀಸರ್, ಮತ್ತು ಚೀಫ್ ಮೆಕ್ಯಾನಿಕಲ್ ಇಂಜಿನಿಯರ್ ಐ.ಟಿ.ಐ ಅವರುಗಳು ಇದ್ದಾರೆ. ಇಷ್ಟು ಜನ ಸದಸ್ಯರನ್ನು ಹೊಂದಿರತಕ್ಕಂತಹ ಸಮಿತಿ ಇದೆ. ಈ ವರ್ಷದಿಂದ ಅಂದರೆ ೧೯೮೨-೮೩ರಿಂದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ತೀರ್ಮಾನ ಆಗಿದೆ. ಅದರ ಪ್ರಕಾರ ವಿದ್ಯಾರ್ಥಿಗಳಿಗೆ ನಾನಾ ಸವಲತ್ತುಗಳನ್ನ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಇದರ ಮುಂಖಾಂತರ ಒಂದು ಐ.ಟಿ.ಐ ಯನ್ನು ಪ್ರಾರಂಭ ಮಾಡಬೇಕು, ಕಾರ್ಮಿಕರ ಮಕ್ಕಳಿಗೆ ಇಂಜಿನಿಯರಿಂಗ್, ವೈದ್ಯಕೀಯ, ಪಾಲಿಟೆಕ್ನಿಕ್ ಮತ್ತು ಐ.ಟಿ.ಐ. ಗಳಲ್ಲಿ ಓದುವವರಿಗೆ ಹಣದ ಸಹಾಯ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅದರ ಪ್ರಕಾರ ಮೆಡಿಕಲ್ ಇಂಜಿನಿಯರಿಂಗ್ ಓದುವವರಿಗೆ ತಲಾ ೧೫೦ ರೂಪಾಯಿಗಳಂತೆಯೂ, ಪಾಲಿಟೆಕ್ನಿಕ್‌ಗಳಲ್ಲಿ ಓದುವವರಿಗೆ ತಲಾ ೭೫ ರೂಪಾಯಿಗಳಂತೆಯೂ, ಮತ್ತು ಐ,ಟಿ.ಐ, ಗಳಲ್ಲಿ ಓದುವವರಿಗೆ ೫೦ ರೂಪಾಯಿಗಳಂತೆಯೂ ಕೊಡಬೇಕೆಂದು ಸಭೆಯಲ್ಲಿ ತೀರ್ಮಾನವಾಗಿದೆ.

ಶ್ರೀ ಬಿ.ವಿ. ಕಕ್ಕಿಲಾಯ.—ತಾವು ಈ ಕಮಿಟಿಯನ್ನು ರಚನೆ ಮಾಡುವಾಗ ಕಾರ್ಮಿಕರ ಸಂಘಟನೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ, ಅವರೆಲ್ಲರಿಗೂ ಪ್ರಾತಿನಿಧ್ಯ ಕೊಟ್ಟಿದ್ದೀರೋ ಇಲ್ಲವೋ ಆ ಪ್ರಶ್ನೆಗೆ ನಾನು ಹೋಗುತ್ತಾ ಇಲ್ಲ. ಒಂದೊಂದು ರೂಪಾಯಿಯನ್ನು ವಸೂಲು ಮಾಡುತ್ತಿದ್ದೀರಲ್ಲ ಯಾವ ವರ್ಗದ ನೌಕರರಿಂದ ವಸೂಲು ಮಾಡುತ್ತೀರಿ ಮತ್ತು ಸಹಾಯವನ್ನು ಯಾವ ವರ್ಗದ ನೌಕರರಿಗೆ ಕೊಡುತ್ತೀರಿ

ಶ್ರೀ ಕೆ. ಯಂಕಟಪ್ಪ.—ಯಾರು ಸಂಬಂಧಪಟ್ಟವರು ಬರುತ್ತಾರೋ ಆ ವರ್ಗ, ಕಾರ್ಪೊರೇಷನ್ ನವರು ಒಂದೊಂದು ರೂಪಾಯಿ ಸಹಾಯಧನ ವಸೂಲು ಮಾಡುತ್ತಾರೆ, ಇದರ ಜೊತೆಯಲ್ಲಿ ಒಂದು ರೂಪಾಯಿಯನ್ನು ಕಾರ್ಪೊರೇಷನ್‌ನವರು ಕೊಡುತ್ತಾರೆ. ಅದೇ ವರ್ಗದ ನೌಕರರಿಗೆ ಅಂದರೆ ಮೂರನೇ ಮತ್ತು ನಾಲ್ಕನೇ ವರ್ಗದ ನೌಕರರಿಗೆ ಇದು ಅನ್ವಯವಾಗುತ್ತದೆ.

ಶ್ರೀ ಬಿ.ವಿ. ಕಕ್ಕಿಲಾಯ.—ಏಕೆಂದರೆ, ಕೆ.ಎಸ್.ಆರ್.ಟಿಸಿ ಯಲ್ಲಿ ಅನೇಕ ವರ್ಗದ ನೌಕರರಿದ್ದಾರೆ, ಉನ್ನತಮಟ್ಟದ ನೌಕರರಿದ್ದಾರೆ. ಕೆಳಮಟ್ಟದ ನೌಕರರಿದ್ದಾರೆ ತಾವು ಒಂದು ರೂಪಾಯಿಯಂತೆ ಯಾವ ವರ್ಗದ್ದಾ ನೌಕರರಿಂದ ವಸೂಲು ಮಾಡುತ್ತೀರಿ ಮತ್ತೆ ಈ ಹಣವನ್ನು ಯಾವ ವರ್ಗದ ನೌಕರರಿಗೆ ಕೊಡುತ್ತೀರಿ, ಮೂರನೇ ಮತ್ತು ನಾಲ್ಕನೇ ವರ್ಗದ ನೌಕರರಿಗೆ ಮಾತ್ರ ಕೊಡುತ್ತೀರಾ, ಮೇಲಿನವರಿಗೂ ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ

ಶ್ರೀ ಕೆ. ಯಂಕಟಪ್ಪ.—ಮೂರನೇ ಮತ್ತು ನಾಲ್ಕನೇ ವರ್ಗದ ನೌಕರರಿಗೆ ಮಾತ್ರ ಎಂದು ಹೇಳಿದೆ.

ಶ್ರೀ ಎಂ. ಚಂದ್ರಶೇಖರ್.—ಇದು ಜಾರಿಗೆ ಬಂದದ್ದು ೧೯೭೮ರಲ್ಲಿ ಈಗ ೪ ವರ್ಷ ಆಯಿತು, ಇದರೊಳಗೆ ಸಾವಿತಾರು ಜನ ನಿವೃತ್ತಿಯಾಗಿರುತ್ತಾರೆ. ಆ ನೌಕರರು ಕೊಟ್ಟಿರುವ ಕಾಂಟ್ರಿಬ್ಯೂಷನ್

ಇದ್ದೇ ಇರುತ್ತದೆ. ಅವರು ನಿವೃತ್ತರಾದರೂ ಕೂಡ ಅವರ ಮಕ್ಕಳಿಗೆ ಮುಂದೆ ಅನುಕೂಲವಾಗುವ ರೀತಿಯಲ್ಲಿ ಏನಾದರೂ ಸಹಾಯ ಮಾಡುತ್ತೀರಾ

ಶ್ರೀ ಕೆ. ಯಂಕಟಪ್ಪ.—ಈ ವಿಷಯವನ್ನು ಅವರ ಸಮಿತಿ ಮುಂದೆ ತಿಳಿಸಿ. ಸಮಿತಿಯಲ್ಲಿ ಅಲ್ಲಿರತಕ್ಕ ನೌಕರರೇ ಇದ್ದಾರೆ, ಎಂಪ್ಲಾಯೀಸೇ ಇರುವುದರಿಂದ ಅವರು ತೀರ್ಮಾನ ತೆಗೆದು ಕೊಳ್ಳುತ್ತಾರೆ.

† **P. L. D. Bank in Hagaribommanahalli.**

1078 SRI N. KARIBASAVANA GOWDA (Hadagali) –Will the Minister for Co-operation be pleased to state.—

(a) the date of establishment of P. L. D. Bank, Hagaribommanahalli,

(b) whether it is working or defunct,

(c) the total amount of loans advanced on wells pump sets, and other agricultural developmental activities by the said P. L. D. Bank ?

SRI H.C. SRIKANTAIAH (Minister for Co-operation).—

(a) 18-11-1978.

(b) Working.

(c) Rs. 5.95 lakhs.

ಶ್ರೀ ಎನ್. ಕರಿಬಸವನಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಪ್ರಕಾರ ಈ ಬ್ಯಾಂಕು ಸ್ಥಾಪಿತವಾಗಿ ೪ ವರ್ಷಗಳಾಯಿತು. ಆದರೆ ಕೊಟ್ಟಿರತಕ್ಕ ಹಣ ೫.೯೫ ಲಕ್ಷ. ಇದರಲ್ಲಿ ಭೂ ಅಭಿವೃದ್ಧಿ ಬ್ಯಾಂಕಿನ ಹಣ ಎಷ್ಟು ಮತ್ತು ರಿಸರ್ವ್‌ಬ್ಯಾಂಕಿನಿಂದ ಬಂದಂಥ ಹಣ ಎಷ್ಟು, ರಿಸರ್ವ್ ಬ್ಯಾಂಕಿನಿಂದ ಹಣ ಬಂದಿದೆಯೇ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ ರಿಸರ್ವ್‌ಬ್ಯಾಂಕಿನಿಂದ ಹಣ ಬಂದಿಲ್ಲ. ಈ ಒಂದು ಹೊಸ ತಾಲ್ಲೂಕು ಉದಯ ಆದಾಗ, ಬೇರೆ ೩ ತಾಲ್ಲೂಕಿನಿಂದ ರಿಸರ್ವ್ ಬ್ಯಾಂಕ್ ಕೊಟ್ಟ ಹಣವನ್ನು ಹಂಚಿರತಕ್ಕಂಥಾದ್ದು ಆಸೆಟ್ಸ್ ಬಂದಿದೆ ಅಷ್ಟೆ. ಆಸೆಟ್ಸ್ ಅಂಡ್ ಲಯಾಬಲಿಟೀಸನ್ನೂ ಸಹ ತೆಗೆದು ಕೊಂಡಿಲ್ಲ. ವಸೂಲಿ ಮಾಡಿಲ್ಲ. ನಮ್ಮ ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕ್ ಕೊಟ್ಟಿರತಕ್ಕಂಥಾದ್ದು. ೮೮ ಲಕ್ಷ ಅಂದರೆ ೮೮ ಸಾವಿರ ರೂಪಾಯಿ.

ಶ್ರೀ ಎನ್. ಕರಿಬಸವನಗೌಡ.—ಉತ್ತರದಲ್ಲಿ ೫.೯೫ ಲಕ್ಷ ರೂಪಾಯಿ ಎಂದು ಅಚ್ಚಾಗಿದೆ, ಅಂದರೆ ಸುಮಾರು ೬ ಲಕ್ಷ ಅಂದುಕೊಳ್ಳಿ, ೪ ವರ್ಷಗಳಿಗೆ. ರಿಸರ್ವ್ ಬ್ಯಾಂಕ್‌ನಿಂದ ಹಣ ಬಂದಿಲ್ಲ ಎಂದು ಹೇಳುತ್ತಾರೆ. ಬ್ಯಾಂಕ್ ಡೀಫಂಕ್ಟ್ ಆಗಿದೆಯೇ ಎಂದು ಕೇಳಿದ್ದಕ್ಕೆ ಡೀಫಂಕ್ಟ್ ಅಲ್ಲ ಕೆಲಸ ಮಾಡುತ್ತಾ ಇದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. You must apply inheritance very perfectly in this case. According to inheritance, the assets and liabilities also should be taken into account. When they have inherited from Hadagali, Kottur and Hospet, why they have not inherited liabilities also ? If you take into consideration the liabilities, the Hagari Bommanahalli definitely becomes defunct Bank.

SRI H. C. SRIKANTAIAH.—It will never become a defunct Bank